*ಶ್ರೀ ಎಚ್. ಎಂ. ಚನ್ನಬಸಪ್ಪ.—ನಮಗೆ ಬಂದಿರ ತಕ್ಕ ರಿಪೋರ್ಟ್ ಪ್ರಕಾರವಾಗಿ ಸುಮಾರು 22 ಎಕರೆಗೆ ನೀರು ಸಾಕಾಗುತ್ತಿರಲಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನೂರಾರು ವರ್ಷ ಗಳಿಂದ ರೈತರ ತಕರಾರು ಯಾವುದೂ ಇಲ್ಲದೆ ಇಂಜಿನಿಯರಿಂಗ್ ಇಲಾಖೆಯವರು ಉದ್ದೇಶಪೂರ್ವಕವಾಗಿ ತೂಬನ್ನು ದೊಡ್ಡದು ಮಾಡಬೇಕೆಂದು ಹೇಳಿದ್ದಾರಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—22 ಎಕರೆಗಳ ಜಮೀನ್ದಾರರು ನೀರು ನರಬರಾಜು ಸಾಕಷ್ಟು ಆಗುತ್ತಿಲ್ಲವೆಂದು ಹೇಳಿದ್ದರ ಮೇಲೆ ಪರಿಶೀಲನೆ ಮಾಡಿ 12 ಅಂಗುಲಗಳ ಕೊಳಾಯಿನಲ್ಲಿ ಸಾಕಷ್ಟು ನೀರು ಒದಗುವುದಿಲ್ಲವೆಂದು 16 ಅಂಗುಲಗಳ ಕೊಳಾಯಿಯನ್ನು ಹಾಕಿದರು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಬೇರೆ ತೂಬಿನಿಂದ ನೀರು ಪಡೆಯುವ ರೈತರು ತಮಗೆ ಇದರಿಂದ ತೊಂದರೆಯಾಗಿದೆ ಎಂದು ತಕರಾರು ಅರ್ಜಿ ಕೊಟ್ಟಿರಲ್ಲವೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರಿಗೂ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದೆ ಸರ್ಕಾರದವರ ಜವಾಬ್ದಾರಿ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಬೇರೆ ಒಂದು high level channel ತೆಗೆದರೆ 250 ಎಕರೆಗಳ ಜಮೀನು ಅಚ್ಚುಕಟ್ಟಿಗೆ ಬರುತ್ತದೆ, ಇದನ್ನು ತಪ್ಪಿಸುವ ದುರುದ್ದೇಶದಿಂದ ಹೀಗೆ ಮಾಡಿದ್ದಾರೆಂದು ರೈತರು ತಮಗೆ ತಕರಾರು ಅರ್ಜಿಕೊಟ್ಟಿರಲಿಲ್ಲವೆ?

Sri H. M. CHANNABASAPPA.—Certain petitions were received. Probably it is one of the items also.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—High level channelಗೆ ತೊಂದರೆಯಾಗದ ಹಾಗೆ ಏರ್ಪಾಡು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

Electrical Department Increments to Operators.

Q.—580. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the number of graduates, diploma holders, certificate holders and practical operators working in the Electrical Department of the State (information to be given categorywar) ;

(*b*) whether increments are being given to all Operators ;

(*c*) the number of Operators holding diploma and certificates who are given increments ;

(*d*) whether the gradation list of Operators of all categories is prepared ?

A.—**Sri H. M. CHANNABASAPPA** (Minister for Industries).—

(*a*) (1) Graduates ... 140
(2) Diploma Holders ... 415
(3) Certificate Holders ... 154
(4) Practical Operators ... 73

(*b*) No. Increment to some Operators could not be sanctioned pending sanction to the allocation statement of Operators.

(*c*) 332.

(*d*) Preparation of up-to-date Gradation List for Graduates and non-Graduates will be taken up after Allocation Statements of all categories are sanctioned.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಪದವೀಧರರ ನಂಬಳ ಎಷ್ಟರಿಂದ ಪ್ರಾರಂಭವಾಗುತ್ತದೆ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅದು ಯಾವ ಹುದ್ದೆಯಲ್ಲಿದ್ದಾರೆನ್ನುವುದರ ಮೇಲೆ ಅವಲಂಬಿಸುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—(ಬಿ) ಭಾಗಕ್ಕೆ ಉತ್ತರವಾಗಿ ಆಪರೇಟರುಗಳ 'ಅಲೋಕೇಷ್ಷನ್ ಸ್ಟೇಟ್‌ಮೆಂಟ್' ಮಂಜೂರಾಗದೆ ಇರುವುದರಿಂದ ಇಕ್ರಿಮೆಂಟ್ ಕೊಟ್ಟಿಲ್ಲವೆಂದು ಹೇಳಿದ್ದೀರಿ. ಇದು ಮಂಜೂರಾಗುವುದಕ್ಕೆ ಎಷ್ಟುಕಾಲ ಹಿಡಿಯುತ್ತದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—Assistant Superintendents, Junior Electrical Engineers ಇವರುಗಳ ಅಲೊಕೇಷ್ಷನ್ ಮಂಜೂರಾಗಿದೆ. ಈಗ ಆಪರೇಟರುಗಳ ಅಲೊಕೇಷ್ಷನ್ ಮಾತ್ರ ನಿಂತಿದೆ. ಅದು ಇವೊತ್ತು ಸರ್ಕಾರದ ಮುಂದೆ ಇದೆ. ಅದನ್ನು ಶೀಘ್ರದಲ್ಲಿಯೇ ಮಂಜೂರ್ಮಾಡಲಾಗುವುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹತ್ತು ಹನ್ನೆರಡು ವರ್ಷ ಸರ್ವಿಸ್ ಆಗಿರುವವರನ್ನು ಬಿಟ್ಟು ನಾಲ್ಕು ಐದು ವರ್ಷ ಸರ್ವಿಸ್ ಆಗಿರುವವರಿಗೆ ಇಕ್ರಿಮೆಂಟ್ ಕೊಟ್ಟಿರುವುದಕ್ಕೆ ಕಾರಣವೇನು?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲೊಕೇಷ್ಷನ್ ಮಾಡುವಾಗ ಎಲ್ಲ ವಿಷಯಗಳನ್ನೂ ಗಮನಕ್ಕೆ ತೆಗೆದುಕೊಂಡು ಮಾಡಬೇಕಾಗುತ್ತದೆ, ಅದಕ್ಕೆ ಪಬ್ಲಿಕ್ ಸರ್ವಿಸ್ ಕಮಿಷನರ ಅಂಗೀಕಾರ ದೊರೆತ ಮೇಲೆ ಜಾರಿಗೆ ಕೊಡಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ವಿಚಾರದಲ್ಲಿ ವಿದ್ಯುಚ್ಛಕ್ತಿ ಇಲಾಖೆಯ ಕೆಲವು ಅಧಿಕಾರಿಗಳಿಗೆ ಅನ್ಯಾಯಮಾಡಿ ಕೆಲವರನ್ನು ಮೇಲೆ ಹಾಕಿ ಇಕ್ರಿಮೆಂಟ್ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಗೆ ಮಾಡುವುದಕ್ಕಾಗುವುದಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನರ ಸ್ಕ್ರುಟಿನಿಯಾಗುವುದರಿಂದ ಹಾಗಾಗಿದ್ದರೆ ಸರಿಪಡಿಸಲಾಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಗ್ರೆಡೇಷ್ಷನ್ ಲಿಸ್ಟ್ ತಯಾರಾಗುವುದಕ್ಕೆ ಎಷ್ಟು ವರ್ಷ ಬೇಕು?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೆಡಿಯಾಗಿದೆ, ಪಬ್ಲಿಕ್ ಸರ್ವಿಸ್ ಕಮಿಷನ್ ಅಲೊಕೇಷ್ಷನ್ ಮಂಜೂರಾತಿ ಕೊಟ್ಟ ಕೂಡಲೆ ಆಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇದುವರೆಗೂ ತಯಾರಾಗದಿರುವುದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—1954ನೆಯ ಇಸವಿಯಲ್ಲಿ ಒಂದು ಆರ್ಡರ್ ಆಯಿತು. ಅದರ ಪ್ರಕಾರ ತಯಾರಾಗುತ್ತಿದೆ.

Cement Road (Grants).

Q.—585. **Sri Y. M. CHANDRASEKHARIAH** (Kadur).—

Will the Government be pleased to state :—

(*a*) the number of miles of cement road formed at present in the State (information to be given districtwar);

(*b*) the amount of annual maintenance grant being given for cement road per mile;

(*c*) the amount of maintenance grant that was being given per mile per year before being converted into cement road ?

A.—**Sri H. M. CHANNABASAPPA** (Minister for Industries).—

(*a*) *Vide* Statement appended.

(*b*) and (*c*) No earmarked grant is allotted for the cement-concreted portions but a part of the mileage grant given for the entire roads in which the cement-concreted portions are situated is utilised for executing essential maintenance works on such portions of the roads. The expenditure per mile of the cement-concreted portion is necessarily smaller than that on the rest of the road. The mileage grant for I Class Roads varies from Rs. 750 to Rs. 1,000.

Sl. No.	No. of Division	No. of miles cement concreted	
		Miles	Furlongs
1	Sagar Division	Nil	...
2	Shimoga Division	27	3
3	Chickmagalur Division	12	3
4	Chitaldrug do	Nil	...
5	Davangere do	Nil	...
6	Mandya do	20	4
7	Malavalli do	Nil	...
8	Tumkur do	31	6
9	Nanjangud do	18	7
10	Bangalore do	30	7
11	Kolar do	Nil	...
12	Mysore do	33	...
13	Krishnarajanagar Division	Nil	..
14	Hassan Division	13	4
15	Bellary do	4	...
16	Materials do	0	5
	Total ...	192	7

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮೈಸೂರು ದೇಶದಲ್ಲಿ ಸಿಮೆಂಟ್ ಮತ್ತು ಟಾರ್ ಮಾಡಿರುವ ರಸ್ತೆ ನುಮಾರು 300-400 ಮೈಲಿಗಳಷ್ಟಿರುವುದಕ್ಕೇಕೆ ಮೈಲೇಜ್ ಮೈಂಟೆನೆನ್ಸ್ ಗ್ರಾಂಟ್ ಕೊಡುವುದು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಸಿಮೆಂಟ್ ರಸ್ತೆಗೆ ಕೊಡುವುದಿಲ್ಲ. ದೊಡ್ಡ ರಸ್ತೆಗಳಲ್ಲಿ ಮಧ್ಯೆ 2—3 ಮೈಲಿ ಸಿಮೆಂಟ್ ಮಾಡದಿರುವುದಕ್ಕೆ ಕೊಡಲಾಗುತ್ತದೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ದಾವಣಗೆರೆ ಮತ್ತು ಚಿತ್ರದುರ್ಗ ಡಿವಿಜ್‌ನಲ್ಲಿ ಸಿಮೆಂಟ್ ರಸ್ತೆ ಯಾವುದೂ ಇಲ್ಲವೆಂದು ಹೇಳಿದೆ. ಅಲ್ಲಿ ಎಲ್ಲಾದರೂ ಸಿಮೆಂಟ್ ರಸ್ತೆ ಮಾಡಬೇಕೆಂದಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಮುಂದಾದರೂ ಅಲ್ಲಿ ಸಿಮೆಂಟ್ ರಸ್ತೆ ಮಾಡುವುದನ್ನು ಪರಿಶೀಲನೆ ಮಾಡುತ್ತೀರಾ ?